ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 48, ಭೂತರಾಮನಹಟ್ಟಿ, ಬೆಳಗಾವಿ -591156
(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ -2021) ಪಿಎಂ-ಉಷಾ (ಮೇರು)

KITTURU RANI CHANNAMMA UNIVERSITY
Vidyasangama, National Highway – 48, Bhootaramanahatti, Belagavi – 591156
(NAAC Accredited with B+ Grade – 2021) PM-USHA (MERU)

E-mail: academic@rcub.ac.in
registrar@rcub.ac.in

ಕುಲಸಚಿವರ ಕಾರ್ಯಾಲಯ
Office of the Registrar

Website: www.rcub.ac.in
Phone No:0831-2565241

ಕ್ರ.ಸಂ.: ಕಿರಾಚವಿ/ಬೆಳಗಾವಿ/ಕುಸಕಾ/ವಿದ್ಯಾಮಂಡಳವಿಭಾಗ/151923/2026-27/ 1941 ದಿನಾಂಕ: 13 JUL 2026

## ಪರಿಷ್ಕೃತ ಸುತ್ತೋಲೆ

**ವಿಷಯ:** 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕ ನಾಲ್ಕು ವರ್ಷದ ಬಿ.ಇಡಿ (ITEP-B.Ed) ಕೋರ್ಸಿಗಾಗಿ ಪ್ರವೇಶ ಪ್ರಕ್ರಿಯೆಯನ್ನು UUCMS ತಂತ್ರಾಂಶದ ಮೂಲಕ ಪ್ರಾರಂಭಿಸುವ ಕುರಿತು.

**ಉಲ್ಲೇಖ**: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08-07-2026.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಜಿಲ್ಲೆಯಲ್ಲಿ ಇರುವ ಸಂಯೋಜಿತ ಬಿ.ಇಡಿ (ITEP-B.Ed) ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2026-27 ನೇ ಸಾಲಿನ ಸ್ನಾತಕ ಬಿ.ಇಡಿ (ITEP-B.Ed) ಕೋರ್ಸಗೆ **ವಿಶ್ವವಿದ್ಯಾಲಯದ ಹಾಗೂ NCTE ಯ ನಿಯಮಾವಳಿಗಳನ್ವಯ** ಪ್ರವೇಶಾತಿ ಪ್ರಕ್ರಿಯೆಯನ್ನು ಈ ಕೆಳಗಿನ ನಿಬಂಧನೆಗಳನ್ವಯ, **ದಿನಾಂಕ:31-07-2026 ರ ಒಳಗಾಗಿ ಪ್ರವೇಶಾತಿ ಶುಲ್ಕವನ್ನು UUCMS ನ ತಂತ್ರಾಂಶದ ಮೂಲಕ ಭರಣಾ ಮಾಡಿ Four year Integrated Teacher Education Programme (ITEP-B.Ed) ಗೆ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ.**

### ಪ್ರವೇಶಾತಿಯಲ್ಲಿ ಅನುಸರಿಸಬೇಕಾದ ಅಂಶಗಳು

1. ITEP-B.Ed ಶಿಕ್ಷಣ ಮಹಾವಿದ್ಯಾಲಯದವರು ತಮ್ಮ ಮಹಾವಿದ್ಯಾಲಯದ UUCMS ತಂತ್ರಾಂಶದ Admin Login ದಲ್ಲಿ 2026-27 ನೇ ಸಾಲಿಗೆ Setup Seat Allocation Method ಹಾಗೂ ಮಹಾವಿದ್ಯಾಲಯದ Fees Details ಅಳವಡಿಸುವುದು ಕಡ್ಡಾಯವಾಗಿರುತ್ತದೆ.
2. **Four-year Integrated Teacher Education Programme (ITEP-B.Ed)** ಕೋರ್ಸನ ಪ್ರವೇಶಾತಿಯನ್ನು ಪ್ರಾರಂಭಿಸುವ ಸಲುವಾಗಿ NCTE ಇವರ ನಿಯಮಾವಳಿಯಂತೆ ಕಡ್ಡಾಯವಾಗಿ **NTA Regulation ರಂತೆ 17th and 18th April 2026** ರಂದು **Entrance Exam ಗೆ** ಹಾಜರಾಗಿರುವ ವಿದ್ಯಾರ್ಥಿಗಳ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಗಳ **ರೋಸ್ಟರ್-ಕಮ್-ಮೇರಿಟ್** ಅನ್ನು ಸಿದ್ದಪಡಿಸಿಕೊಂಡು, ಸದರಿ ರೋಸ್ಟರ್‌ನಂತೆ, 2026-27 ನೇ ಸಾಲಿನ **(ITEP-B.Ed)** ಕೋರ್ಸಗೆ ಪ್ರವೇಶ ಪಡೆದುಕೊಳ್ಳಬಹುದಾಗಿದೆ.
3. ಪ್ರಸಕ್ತ ಸಾಲಿನ ಸ್ನಾತಕ ಕೋರ್ಸುಗಳ ಪ್ರವೇಶಾತಿಗಳು ಮತ್ತು ತರಗತಿಗಳು ಪ್ರಾರಂಭವಾಗಿರುತ್ತದೆ. ಅದರನ್ವಯ, ವಿವಿಯ ಸ್ನಾತಕ ಕೋರ್ಸುಗಳ ಪ್ರವೇಶಾತಿ ನಿಯಮಾವಳಿಯಂತೆ ಹಾಗೂ ಶೈಕ್ಷಣಿಕ ವೇಳಾಪಟ್ಟಿಯನ್ವಯ, **2023 ರ ಸರಕಾರದ ಆದೇಶದನ್ವಯ ಬಿ.ಇಡಿ ಕೋರ್ಸಗೆ ಏಕರೂಪ ಶುಲ್ಕವನ್ನು 2026-27 ನೇ ಸಾಲಿನ ITEP-B.Ed ಕೋರ್ಸಗೆ ಆಕರಿಸಲಾಗುವುದು.**

ಮುಂದುವರೆದು..... .02

4. ಸ್ನಾತಕ ಕೋರ್ಸುಗಳಿಗೆ ನಿಗಧಿಪಡಿಸಿದ ಅರ್ಹತಾ ಪ್ರಮಾಣ ಪತ್ರ ಪಡೆಯಲು **ಕರ್ನಾಟಕದ ಸರಕಾರದಿಂದ ನಡೆಸುವ ಪಿಯುಸಿ ಬೋರ್ಡನಿಂದ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಬೇರೆ ವಿಶ್ವವಿದ್ಯಾಲಯ/ಬೇರೆ ರಾಜ್ಯ/ಪಿಯುಸಿ (10+2)/ಕರ್ನಾಟಕೇತರ (non-Karnataka)** ವಿದ್ಯಾರ್ಥಿಗಳು ಪ್ರವೇಶಾತಿ ಮುಂಚಿತವಾಗಿ ಕಡ್ಡಾಯವಾಗಿ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ ಪಡೆಯುವ ಷರತ್ತಿನೊಂದಿಗೆ ನಾಲ್ಕು ವರ್ಷದ ಬಿ.ಇಡಿ ಕೋರ್ಸಗೆ ಪ್ರವೇಶ ಪಡೆದುಕೊಳ್ಳಬಹುದಾಗಿದೆ.

| SL No | Eligibility Certificate Fee Details | Fee Rs |
|---|---|---|
| 01 | Karnataka Students<br>**(ಕರ್ನಾಟಕದ PUC Board ಹೊರತುಪಡಿಸಿ)** | 2,160/- |
| 02 | Non-Karnataka Students | 5,000/- |
| 03 | Without Eligibility Certificate admission penalty to Student | 1,000/- |
| 04 | Without Eligibility Certificate admission penalty to Principal | 12,000/- |

5. ಅರ್ಹತಾ ಪ್ರಮಾಣ ಪತ್ರ ಪಡೆಯದೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ್ದು ಕಂಡು ಬಂದಲ್ಲಿ ಕಿರಾಚವಿ ಸ್ನಾತಕ ಸುತ್ತೋಲೆಯ ನಿಯಮಾವಳಿ ಪ್ರಕಾರ **ಪ್ರತಿ ವಿದ್ಯಾರ್ಥಿಗೆ ರೂ:1,000/-**ದಂಡವನ್ನು ಮತ್ತು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ **ಪ್ರತಿ ವಿದ್ಯಾರ್ಥಿಗೆ ರೂ.12,000/-ಗಳ** ದಂಡವನ್ನು ವಿಧಿಸಿ, ಅರ್ಹತಾ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.
6. 2026-27 ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಮತ್ತು ಶೈಕ್ಷಣಿಕ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ನಿಗದಿಪಡಿಸಿದ ಶೈಕ್ಷಣಿಕ ವೇಳಾಪಟ್ಟಿಯಂತೆ ನಡೆಸತಕ್ಕದ್ದು.
7. ಕಾಲಕಾಲಕ್ಕೆ ಹೊರಡಿಸಿರುವ NCTE/ನ್ಯಾಯಾಲಯದ ಆದೇಶಗಳು/ಉನ್ನತ ಶಿಕ್ಷಣ ಇಲಾಖೆ/ಮತ್ತು ವಿಶ್ವವಿದ್ಯಾಲಯದ ಆದೇಶಗಳನ್ನು ಪಾಲಿಸತಕ್ಕದ್ದು.
8. ವಿದ್ಯಾರ್ಥಿಗಳು ಲಿಖಿತವಾಗಿ ಆಯ್ಕೆ ಮಾಡಿಕೊಂಡ ಬೋಧನಾ ವಿಷಯಗಳ ತರಗತಿಗಳಿಗೆ ಮಾತ್ರ ಹಾಜರು ಪಡಿಸಿಕೊಳ್ಳುವುದು.
9. ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವೈಬ್‌ಸೈಟನಲ್ಲಿ ಅಳವಡಿಸಿದ ಸ್ನಾತಕ (ITEP-B.Ed) ಕೋರ್ಸಗಳ ಪಠ್ಯಕ್ರಮಗಳನ್ನೇ ಕಡ್ಡಾಯವಾಗಿ ತರಗತಿಗಳಲ್ಲಿ ಬೋಧಿಸುವುದು.
10. ಪ್ರತಿ ವಿದ್ಯಾರ್ಥಿಯ ಹಾಜರಾತಿಯು ಶೇಕಡಾ 85% ಪೂರೈಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದರ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸುವುದು ಹಾಗೂ ಹಾಜರಾತಿ ಕೊರತೆ ಉಂಟಾದಲ್ಲಿ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ನಿಯಮಾವಳಿ ಪ್ರಕಾರ ಅವಕಾಶ ನೀಡಬಾರದು.
11. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.rcub.ac.in ಜಾಲತಾಣದಿಂದ ಪಡೆದು ಅಳವಡಿಸಿಕೊಳ್ಳುವುದು.
12. ನಿಗದಿಪಡಿಸಿದ ಪ್ರವೇಶ ಮಿತಿಯೊಳಗೆ ಪ್ರವೇಶ ಪಡೆಯತಕ್ಕದ್ದು, ಪ್ರವೇಶ ಮಿತಿಯನ್ನು ಉಲ್ಲಂಘನೆ ಮಾಡಬಾರದು, ಹಾಗೇನಾದರೂ ಮಾಡಿದ್ದಲ್ಲಿ ವಿಶ್ವವಿದ್ಯಾಲಯ ಯಾವುದೇ ರೀತಿಯಿಂದಲೂ ಜವಾಬ್ದಾರಿಯಾಗಿರುವುದಿಲ್ಲ.
13. UUCMS ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಹೆಸರುಗಳನ್ನು Aadhar Card ದಲ್ಲಿ ಇರುವ ಹಾಗೆ ಸರಿಯಾಗಿ ಭರ್ತಿ ಮಾಡತಕ್ಕದ್ದು, ಒಂದು ವೇಳೆ ಹೆಸರುಗಳನ್ನು ತಪ್ಪು ಭರ್ತಿ ಮಾಡಿದ್ದಲ್ಲಿ ಮುಂದಿನ ಎಲ್ಲ ಆಗುಹೋಗುಗಳಿಗೆ ವಿದ್ಯಾರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.
14. ವಿಶ್ವವಿದ್ಯಾಲಯದ ಸುತ್ತೋಲೆಗಳಿಗೆ ಆದ್ಯತ ನೀಡಿ ತ್ವರಿತವಾಗಿ ಸ್ಪಂದಿಸುವುದು.
15. ಪರೀಕ್ಷೆಗೆ ಸಂಬಂಧಪಟ್ಟ ಸುತ್ತೋಲೆಗಳಿಗೆ ಆದ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

ಮುಂದುವರೆದು.. ... .03

16. 2026-27 ನೇ ಸಾಲಿನ ಪ್ರವೇಶ ನಿಯಮಾವಳಿ ಅನುಗುಣವಾಗಿ ಪ್ರವೇಶ ಪಡೆಯುವುದು.
17. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಇತರೆ ಮಾಹಿತಿಗಳನ್ನು www.rcub.ac.in **Website** ನಲ್ಲಿ ನೋಡತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಕಚೇರಿ ದೂರವಾಣಿ ಸಂಖ್ಯೆ: **0831-2565257** ಅನ್ನು ಸಂಪರ್ಕಿಸುವುದು.
18. ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ UUCMS ತಂತ್ರಾಂಶದಲ್ಲಿ ಏನಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ uucms@rcub.ac.in ಗೆ mail ಕಳುಹಿಸುವುದು.
19. ಈ ಮೊದಲು ಸ್ನಾತಕ ಕೋರ್ಸುಗಳಿಗೆ ಪ್ರವೇಶಾತಿ ಪಡೆಯುವಾಗ UUCMS ತಂತ್ರಾಂಶದಲ್ಲಿ Create ಯಾಗಿರುವ ID ಅನ್ನು ಬಿ.ಇಡಿ (ITEP-B.Ed) ಪ್ರವೇಶ ಪಡೆಯುವಲ್ಲಿ ಉಪಯೋಗಿಸಿ, ಅರ್ಜಿ ಸಲ್ಲಿಸುವುದು. **(ಉದಾ: 2200231726)**
20. UUCMS ತಂತ್ರಾಂಶದಲ್ಲಿ ಏನಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಸಹಾಯವಾಣಿ ನಂ: 08024411500 ವನ್ನು ಸಂಪರ್ಕಿಸುವುದು ಅಥವಾ ಮಹಾವಿದ್ಯಾಲಯದ **Admin Login** ದಿಂದ **Ticket Raise** ಮಾಡುವುದು.

13/7

**ಉಪಕುಲಸಚಿವರು**

ಉಪ ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

**ಲಗತ್ತು:** 2026-27 ನೇ ಸಾಲಿನ ITEP-B.Ed ಕೋರ್ಸನ ಪ್ರವೇಶಾತಿ ಶುಲ್ಕದ ಅಧಿಸೂಚನೆ ಪ್ರತಿ.

**ಇವರಿಗೆ**

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಸಂಯೋಜಿತ ನಾಲ್ಕು ವರ್ಷದ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಕುಲಸಚಿವರು (ಮೌಲ್ಯಮಾಪನ) ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಡೀನರು, ಶಿಕ್ಷಣ ನಿಖಾಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ನೋಡಲ್ ಅಧಿಕಾರಿಗಳು, UUCMS ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ಕಿರಾಚವಿ ಬೆಳಗಾವಿ.
6. ಮಾನ್ಯ ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕಿರಾಚವಿ ಬೆಳಗಾವಿ.